

ಹೌದು, ನಾನು ಅಸ್ವಸ್ಥನಾಗಿದ್ದೇನೆ. ತೀವ್ರ ಅನಾರೋಗ್ಯ ಕಾಡುತ್ತಿದೆ. ಆದರೆ ನನ್ನ ಮನಸ್ಸು... ಅದರ ಮೇಲೆ ನಿಯಂತ್ರಣವನ್ನು ಕಳೆದುಕೊಂಡಿದ್ದೇನೆ ಎಂದು ಯಾರು ಹೇಳಿದರು? ನನಗೆ ಮತಿಭ್ರಮಣೆ ಆಗಿದೆ ಎಂದು ಯಾಕೆ ಹೇಳುತ್ತಿದ್ದೀರಿ? ನನ್ನ ಮನಸ್ಸಿನ ಮೇಲೆ ಸಂಪೂರ್ಣ ಹಿಡಿತವಿರುವುದು ನಿಮಗೆ ಕಾಣುತ್ತಿಲ್ಲವೆ? ನಾನು ಹುಚ್ಚನಲ್ಲ ಎಂದು ನಿಮಗೆ ಸ್ಪಷ್ಟವಾಗುತ್ತಿಲ್ಲವೆ? ಆದರೆ, ಈ ಅಸ್ವಸ್ಥತೆ ನನ್ನ ಮನಸ್ಸನ್ನೂ, ಭಾವನೆಗಳನ್ನು, ಇಂದ್ರಿಯಗಳನ್ನು ಇನ್ನೂ ಗಟ್ಟಿ ಮಾಡಿದೆ, ಅವು ಹೆಚ್ಚು ಶಕ್ತವಾಗಿದೆ. ಸ್ಪಷ್ಟವಾಗಿ ಹೇಳಬೇಕೆಂದರೆ, ನನ್ನ ಶ್ರವಣಶಕ್ತಿ ಸೂಕ್ಷ್ಮವಾಗಿದೆ. ಎಂದೂ ಕೇಳದ ಶಬ್ದಗಳನ್ನೂ ಕೇಳಲು ಪ್ರಾರಂಭಿಸಿದ್ದೇನೆ. ಸ್ವರ್ಗದ ಶಬ್ದಗಳು, ನರಕದ ಶಬ್ದಗಳು...

ಹಾಂ! ಕೇಳಿ! ಇದೆಲ್ಲಾ ಹೇಗಾಯಿತು ಎಂದು ಹೇಳುತ್ತೇನೆ. ಆಗ ನನ್ನ ಮನಸ್ಸಿನ ಸ್ವಸ್ಥತೆಯ ಬಗ್ಗೆ ನಿಮಗೆ ಸ್ಪಷ್ಟವಾಗಿ ತಿಳಿಯುತ್ತದೆ.

ನನ್ನ ತಲೆಯೊಳಗೆ ಈ ಹುಳ ಹೇಗೆ ಹೊಕ್ಕಿತೋ ಹೇಳಲಾರೆ. ನನಗೆ ಆ ಮುದುಕನನ್ನು ಕಂಡರೆ ಆಗುತ್ತಿರಲಿಲ್ಲ ಅಂತಲ್ಲ; ನಾನು ಅವನನ್ನು ಇಷ್ಟಪಡುತ್ತಿದ್ದೆ. ಯಾವತ್ತೂ ಅವನು ನನಗೆ ನೋವುಂಟು ಮಾಡಿರಲಿಲ್ಲ, ತೊಂದರೆ ಕೊಟ್ಟಿರಲಿಲ್ಲ. ಅವನ ಹಣವೂ ನನಗೆ ಬೇಕಿರಲಿಲ್ಲ. ನನಗೆ ಅನಿಸುತ್ತೆ... ಅವನ ಆ ಕಣ್ಣು. ಒಂದು ರೀತಿಯಲ್ಲಿ ರಣಹದ್ದಿನ ಕಣ್ಣುಗಳನ್ನು ನೋಡಿದಂತೆ ಆಗುತ್ತಿತ್ತು. ರಾಕ್ಷಸ ಪ್ರವೃತ್ತಿಯ ರಣಹದ್ದಿನ ಆ ಭೀಕರ ಕಣ್ಣುಗಳು... ಒಂದು ಪ್ರಾಣಿ ಸಾಯುವ ತನಕ ಕಾಯುತ್ತಿದ್ದು, ಅದು ಜೀವ ಬಿಟ್ಟ ಕ್ಷಣವೇ, ಎರಗಿ, ಹೆಣವನ್ನು ಛಿದ್ರಛಿದ್ರ ಮಾಡಿ ತಿನ್ನುತ್ತವಲ್ಲ... ಅದೇ ರೀತಿ ಇನ್ನೊಬ್ಬರ ಸಾವಿಗಾಗಿ ಕಾಯುವಂತಹ ರಣಹದ್ದಿನ ಕ್ರೂರ ಕಣ್ಣನ್ನು ಆ ಮುದುಕನ ಕಣ್ಣು ನೆನಪಿಗೆ ತರುತ್ತಿತ್ತು. ಆ ಮುದುಕ ನನ್ನನ್ನು ಆ ಭಯಂಕರ ಕಣ್ಣಿನಿಂದ ನೋಡಿದಾಗಲೆಲ್ಲಾ ನನ್ನ ಮೈಯಲ್ಲಿ ತಣ್ಣನೆಯ ರಕ್ತ ಹರಿದಂತಾಗುತ್ತಿತ್ತು. ನನ್ನ ದೇಹ ಮರಗಟ್ಟುತ್ತಿತ್ತು. ಆಗಲೇ... ಅಂಥ ಸಮಯದಲ್ಲೇ... ನಾನು ಆ ಮುದಿಯನನ್ನು ಕೊಂದು ಆ ಕ್ರೂರ ಕಣ್ಣಗಳು ಎಂದೆಂದಿಗೂ ತೆರೆಯದಂತೆ ಮಾಡಬೇಕೆಂದುಕೊಂಡೆ.

ಈಗ ಹೇಳಿ, ನೀವು ನನಗೆ ಹುಚ್ಚು ಹಿಡಿದಿದೆ ಎಂದು ಭಾವಿಸುತ್ತೀರಾ? ನೋಡಿ, ಈ ಹುಚ್ಚರು ಸಂಚುಗಳನ್ನು ಹೂಡುವಷ್ಟು ಶಕ್ತರಲ್ಲ. ನೀವು ನನ್ನನ್ನು ನೋಡಬೇಕಿತ್ತು. ಆ ವಾರಪೂರ್ತಿ ಆ ಮುದುಕನ ಜೊತೆ ಎಷ್ಟು ಸ್ನೇಹ, ಪ್ರೀತಿ, ಆಪ್ತತೆಯಿಂದ ನಡೆದುಕೊಂಡೆ ಎಂದರೆ, ನೀವು ನಂಬುವುದಿಲ್ಲ.

ಪ್ರತಿ ರಾತ್ರಿ ಸರಿಯಾಗಿ 12 ಗಂಟೆಗೆ ಆ ಮುದುಕನ ಕೋಣೆಯ ಕದವನ್ನು ತೆರೆಯುತ್ತಿದ್ದೆ. ಮೊದಲು ನನ್ನ ಕೈ ತೂರುವಷ್ಟು, ನಂತರ ತಲೆ ತೂರುವಷ್ಟು ಅಗಲಕ್ಕೆ ಬಾಗಿಲನ್ನು ನಿಧಾನವಾಗಿ ತೆರೆಯುತ್ತಿದ್ದೆ. ನನ್ನ ಕೈಯಲ್ಲಿ ಬಟ್ಟೆಯಿಂದ ಮರೆಮಾಡಿದ ದೀಪ. ಅಲ್ಲೇ ನಿಶ್ಶಬ್ದವಾಗಿ ನಿಲ್ಲುತ್ತಿದ್ದೆ. ಆಮೇಲೆ, ಜಾಗ್ರತೆಯಿಂದ ದೀಪದ ಮೇಲಿನಿಂದ ಬಟ್ಟೆಯನ್ನು ಸ್ವಲ್ಪವೇ ಸರಿಸಿ, ಒಂದು ಸಣ್ಣ ಬೆಳಕು ಅವನ ಕಣ್ಣಿನ ಮೇಲೆ ಬೀಳುವಂತೆ ಮಾಡುತ್ತಿದ್ದೆ. ಹೀಗೆ ಏಳು ರಾತ್ರಿಗಳು, ಏಳು ದೀರ್ಘ ರಾತ್ರಿಗಳು, ಪ್ರತಿ ಮಧ್ಯರಾತ್ರಿ... ಆದರೆ, ಯಾವಾಗಲೂ ಅವನ ಕಣ್ಣುಗಳು ಮುಚ್ಚಿಯೇ ಇರುತ್ತಿದ್ದವು. ಹೀಗಾಗಿ ನನ್ನ ಕೆಲಸ ಆಗುತ್ತಿರಲಿಲ್ಲ. ನನ್ನ ಉದ್ದೇಶ ಆ ಮುದುಕನನ್ನು ಕೊಲ್ಲುವುದಲ್ಲ, ಅವನ ಕಣ್ಣು, ಆ ಕ್ರೂರ ಕಣ್ಣುಗಳನ್ನು ಕೊಲ್ಲುವುದಾಗಿತ್ತು.

ಯಥಾಪ್ರಕಾರ ಪ್ರತಿದಿನ ಬೆಳಗ್ಗೆ ಅವನ ಕೋಣೆಗೆ ಹೋಗುತ್ತಿದ್ದೆ. ಅವನಿಗೆ ನಿದ್ದೆ ಬಂದಿತೆ, ಯಾವ ತೊಂದರೆಯೂ ಆಗಲಿಲ್ಲವೆ ಎಂದು ಆತ್ಮೀಯತೆಯಿಂದ, ಪ್ರೀತಿಯಿಂದ ಕೇಳುತ್ತಿದ್ದೆ. ಪ್ರತಿ ರಾತ್ರಿ ಅವನು ನಿದ್ದೆಮಾಡುವುದನ್ನು ನಾನು ಗಮನಿಸುತ್ತಿದ್ದೆ ಎಂದು ಖಂಡಿತ ಅವನು ಊಹಿಸಲಿಕ್ಕೂ ಸಾಧ್ಯವಿರಲಿಲ್ಲ.

ಎಂಟನೆಯ ರಾತ್ರಿ ನಾನು ಎಂದಿಗಿಂತ ಜಾಗರೂಕನಾಗಿ ಬಾಗಿಲನ್ನು ತೆರೆದೆ. ಗಡಿಯಾರದ ಕೈಗಳು ನನ್ನ ಕೈಗಳಿಗಿಂತ ವೇಗವಾಗಿ ಚಲಿಸುವಂತೆ ಅನಿಸಿತು. ನಾನು ಯಾವತ್ತೂ ಅಷ್ಟು ಆತ್ಮವಿಶ್ವಾಸದಿಂದ, ಧೈರ್ಯದಿಂದ ಇದ್ದಂತೆ ನೆನಪಿಲ್ಲ. ಅಂದು ನಾನು ಯಶಸ್ವಿ ಆಗುತ್ತೇನೆ ಎಂಬ ನಂಬಿಕೆಯಿತ್ತು.

ಆ ಮುದುಕ ನಾನು ಬರುವುದನ್ನು ಕನಸಿನಲ್ಲಿಯೂ ಎಣಿಸದ ಹಾಗೆ

ಮೊದಲು ತಲೆಯನ್ನು ಕತ್ತರಿಸಿದ ನಂತರ ಕೈ ಮತ್ತು ಕಾಲುಗಳನ್ನೂ ತರಿದು ಹಾಕಿದೆ. ಒಂದು ಹನಿ ರಕ್ತವೂ ನೆಲದ ಮೇಲೆ ಬೀಳದಂತೆ ಜಾಗ್ರತೆಯಿಂದ ನೋಡಿಕೊಂಡೆ. ನೆಲಕ್ಕೆ ಹಾಕಿದ್ದ ಮೂರು ಮರದ ಹಲಗೆಗಳನ್ನು ಸರಿಸಿ, ದೇಹದ ಭಾಗಗಳನ್ನೂ ಕೆಳಗೆ ಹಾಕಿದೆ. ಮತ್ತೆ ಹಲಗೆಗಳನ್ನೂ ಅಚ್ಚುಕಟ್ಟಾಗಿ ಮೊದಲಿನಂತೆಯೇ ಜೋಡಿಸಿದೆ. ಯಾರಿಗೂ ಹಲಗೆ ಸರಿಸಿರುವುದು ಗೋಚರಿಸಲು ಸಾಧ್ಯವೇ ಇರಲಿಲ್ಲ.